

بِسْمِ اللّٰہِ الرَّحْمَنِ الرَّحِیم

# ಯು.ಕೆ. ಜಲ್ಸ : ಅತಿಥಿ ಸತ್ಕಾರ ಮತ್ತು ಕಾರ್ಯಕರ್ತರ ಕರ್ತವ್ಯಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **05–08–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇನ್‌ಶಾಅಲ್ಲಾಹ್– ಮುಂದಿನ ವಾರದ ಜುಮುಅ ಮೊದಲುಗೊಂಡು ಬ್ರಿಟನಿನ ಜಲ್ಸಾಸಾಲಾನ ಪ್ರಾರಂಭವಾಗಲಿದೆ. ಜಲ್ಸದಲ್ಲಿ ಭಾಗವಹಿಸಲು ವಿವಿಧ ದೇಶಗಳಿಂದ ಅತಿಥಿಗಳ ಆಗಮನ ಪ್ರಾರಂಭವಾಗಿದೆ. ವಿವಿಧ ದೇಶಗಳಿಂದ ಬರುವ ಅತಿಥಿಗಳಿಗೆ ಮತ್ತು ಬ್ರಿಟನಿನ ವಿವಿಧ ಪ್ರದೇಶಗಳಿಂದ ಆಗಮಿಸುವವರಿಗೆ ಅತ್ಯುತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಭಾಗ್ಯವನ್ನು ಅಲ್ಲಾಹನು ಜಲ್ಸಸಾಲಾನದ ವ್ಯವಸ್ಥಾಪಕರಿಗೆ ಅನುಗ್ರಹಿಸಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ಜಲ್ಸಕ್ಕೆ ಆಗಮಿಸುವ ಅತಿಥಿಗಳಿಗೆ ಸೇವೆ ಸಲ್ಲಿಸಲು ಬ್ರಿಟನಿನ ಎಲ್ಲ ಪ್ರದೇಶಗಳಿಂದಲೂ ವೃದ್ಧರು, ಯುವಜನರು, ಮಕ್ಕಳು, ಮಹಿಳೆಯರು ಸ್ವಯಂಸೇವಕರಾಗಿ ಸೇವೆ ಸಲ್ಲಿಸಲು ಮುಂದೆ ಬರುತ್ತಿದ್ದಾರೆ. ಜಲ್ಸದಲ್ಲಿ ಭಾಗವಹಿಸುವವರ ಸಂಖ್ಯೆ ವರ್ಧಿಸುವ ಹಾಗೆ ಜಲ್ಸದ ವ್ಯವಸ್ಥೆ ವಿಶಾಲವಾಗುತ್ತದೆ. ಸ್ವಯಂ ಸೇವಕರ ಆವಶ್ಯಕತೆ ಸಹ ವರ್ಧಿಸುತ್ತದೆ. ಅಲ್ಲಾಹನ ಅನುಗ್ರಹದಿಂದ ಯಾವುದೇ ರೀತಿ ಬೇಸರಪಡದೆ ಸಂತೋಷದಿಂದ ಮಕ್ಕಳು, ಯುವಜನರು ಮತ್ತು ಮಹಿಳೆಯರು ತಮ್ಮನ್ನು ಸೇವೆಗೋಸ್ಕರ ಅರ್ಪಿಸುತ್ತಿದ್ದಾರೆ. ಯುವಕರು ಮತ್ತು ಮಕ್ಕಳಲ್ಲಿ ಬಹುತೇಕ ಮಂದಿ ತಮ್ಮನ್ನು ಸ್ವಯಂ ಸೇವಕರಾಗಿ ಅರ್ಪಿಸಿಕೊಂಡು ಈ ಸೇವೆ ಸಲ್ಲಿಸುವುದು ಅವರಿಗೆ ಅಲ್ಲಾಹನು ನೀಡಿದ ಬಹಳ ದೊಡ್ಡ ಅನುಗ್ರಹ ಎಂದು ಭಾವಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸುವ ಭಾಗ್ಯವನ್ನು ಅಲ್ಲಾಹನು ತಮಗೆ ನೀಡಿದನೆಂದು ಅವರು ಯೋಚಿಸುತ್ತಾರೆ. ಅಲ್ಲಾಹನ ಅನುಗ್ರಹದಿಂದ ಲೋಕದ ಪ್ರತಿಯೊಂದು ದೇಶದಲ್ಲಿ ಜಮಾಅತ್‌ಗಳ ಜನರ ಮನೋಭಾವ ಆ ರೀತಿ ಇದೆ. ಜಮಾಅತಿನ ಪ್ರತಿಯೊಂದು ವಿಭಾಗದ ಜನರು ಪ್ರತಿಯೊಂದು ಪ್ರಾಯದ ಜನರು ಜಲ್ಸಸಾಲಾನದಲ್ಲಿ ಸೇವೆ ಸಲ್ಲಿಸಬೇಕೆಂಬ ಮನೋಭಾವವನ್ನು ಹೊಂದಿದ್ದಾರೆ.

ಅಲ್ಲಾಹನ ಅನುಗ್ರಹದಿಂದ ಲೋಕದ ಪ್ರತಿಯೊಂದು ದೇಶದ ಅಹ್ಮದಿಯರ ಮನೋಭಾವ ಇದೇ ರೀತಿಯಿದೆ. ಆಫ್ರಿಕದವರಾಗಲಿ, ಇಂಡೋನೇಶಿಯದವರಾಗಲಿ, ದ್ವೀಪಗಳ ನಿವಾಸಿಯಾಗಿರಲಿ, ಪಶ್ಚಿಮದ ಅಭಿವೃದ್ಧಿ ಹೊಂದಿದ ದೇಶಗಳ ನಿವಾಸಿಯಾಗಿರಲಿ ಅವರ ಮನೋಭಾವ ಇದೇ ರೀತಿ ಇರುತ್ತದೆ. ಸಾಮಾನ್ಯವಾಗಿ ಸ್ಕೂಲ್‌ಗಳಿಗೂ ಕಾಲೇಜುಗಳಿಗೂ ಹೋಗುವ ವಿದ್ಯಾರ್ಥಿಗಳು ರಜಾ ಕಾಲದಲ್ಲಿ ಆಟವಾಡಲು ಮತ್ತು ಪ್ರವಾಸ ಮಾಡಲು ಇಚ್ಛಿಸುತ್ತಾರೆ. ಲೌಕಿಕ ಕೆಲಸಗಳಲ್ಲಿರುವವರು ರಜೆಯ ಕಾಲದಲ್ಲಿ ವಿಶ್ರಾಂತಿ ಪಡೆಯಲು ಮತ್ತು ಕುಟುಂಬದೊಂದಿಗೆ ರಜೆಯನ್ನು ಕಳೆಯಲು ಆದ್ಯತೆ ನೀಡುತ್ತಾರೆ. ಆದರೆ, ಅಹ್ಮದಿಯರ ಆದ್ಯತೆ ಬೇರೆಯೇ ಆಗಿರುತ್ತದೆ. ಅಹ್ಮದಿಯರ ಜಲ್ಸ ಸಾಲಾನ ರಜಾಕಾಲದಲ್ಲಿ ಜರಗುವುದಾದರೆ ವಿದ್ಯಾವಂತರೂ ವಿದ್ಯಾಹೀನರೂ ಅಧಿಕಾರಿಗಳೂ ಅಧೀನ ನೌಕರರೂ ತಜ್ಞ ಉದ್ಯೋಗಿಗಳೂ ಸಾಮಾನ್ಯ ಕೆಲಸಗಾರರೂ ವಿದ್ಯಾರ್ಥಿಗಳೂ ಎಲ್ಲರೂ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸಲು ಸ್ವಯಂ ಸೇವಕರಾಗಿ ಮುಂದೆ ಬರುತ್ತಾರೆ.

ಕೆಲವು ಸಾರಿ ಕೆಲವು ಜನರ ಸೇವಾಮನೋಭಾವ ನಿಸ್ಸಂಶಯವಾಗಿಯೂ ಬಹಳ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ಆದರೆ ಪ್ರತಿಯೊಬ್ಬರ ಮನೋಭಾವ ಬೇರೆ ಬೇರೆ ಇರುತ್ತದೆ. ಕೆಲವರು ಧೈರ್ಯಗುಂದಿದವರಾಗಿರುತ್ತಾರೆ. ಕೆಲವು ಜನರ ಅಜ್ಞಾನದ ಕಾರಣದಿಂದ ಅವರು ಮಾಡುವ ಕೆಲಸ ಅತಿಥಿಗಳಿಗೆ ಕಷ್ಟವನ್ನುಂಟುಮಾಡುವ ಸಾಧ್ಯತೆಯಿದೆ. ಆದರೆ ಅವರಿಗೆ ನೆನಪಿಸಿಕೊಡುವಾಗ ಅವರು ಚುರುಕಾಗಿ ಕೆಲಸ ಮಾಡುತ್ತಾರೆ. ಆಗ ಅವರು ಹೆಚ್ಚು ಶ್ರದ್ಧೆಯಿಂದ ಕೆಲಸಮಾಡಲು ಪ್ರಯತ್ನ ಮಾಡುತ್ತಾರೆ. ನೆನಪಿಸಿಕೊಡುವುದು ಮತ್ತು ಚುರುಕಾಗಿ ಕೆಲಸಮಾಡುವಂತೆ ಪ್ರೇರೇಪಿಸುವುದು ಸಹ ಅಲ್ಲಾಹನ ಆಜ್ಞೆ ಪ್ರಕಾರವೇ ಆಗಿದೆ. ಆದುದರಿಂದ ಪ್ರತಿವರ್ಷ ನಾನು ಜಲ್ಸದ ಒಂದು ಜುಮುಅಕ್ಕೆ ಮೊದಲು ಇದರ ಬಗ್ಗೆ ಗಮನ ಹರಿಸುತ್ತೇನೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರು ಅತಿಥಿ ಸತ್ಕಾರ ಮಾಡಿದ ಬಗ್ಗೆ ಪ್ರಸ್ತಾಪಿಸಿ, ಅತಿಥಿ ಸತ್ಕಾರದ ಮಹತ್ವವನ್ನು ಪ್ರಕಟಿಸಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ವಿವಿಧ ಸಂದರ್ಭಗಳಲ್ಲಿ ಅತಿಥಿ ಸತ್ಕಾರದ ಮಹತ್ವ ಮತ್ತು ಅದರ ವಿಧಾನಗಳನ್ನು ವಿವರಿಸಿದ್ದಾರೆ. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದರ ಕಡೆಗೆ ವಿಶಿಷ್ಟವಾಗಿ ನಮ್ಮ ಗಮನ ಸೆಳೆದಿದ್ದಾರೆ. ಅವರು ತನ್ನ ಆಗಮನದ ಉದ್ದೇಶಗಳಲ್ಲಿ ಒಂದು, ಧರ್ಮದ ಆವಶ್ಯಕತೆಗೋಸ್ಕರ ಪ್ರಯಾಣ ಮಾಡಿ ಆಗಮಿಸುವ ಅತಿಥಿಗಳಿಗೆ ಅತಿಥಿ ಸತ್ಕಾರ ಮಾಡುವುದಾಗಿದೆ ಎಂದು ಹೇಳಿರುತ್ತಾರೆ. ಈಗ ಲೋಕದ ಮೂಲೆ ಮೂಲೆಗಳಲ್ಲಿ ಜರಗುತ್ತಿರುವ ಜಲ್ಸಗಳು ಈ ದೃಶ್ಯವನ್ನು ತೋರಿಸಿಕೊಡುತ್ತದೆ. ಜನರು ಬಹುಸಂಖ್ಯೆಯಲ್ಲಿ ಜಲ್ಸಗಳಿಗೆ ಆಗಮಿಸುತ್ತಾರೆ. ಅಲ್ಲಿ ಅವರು ಶಾರೀರಿಕ ಮತ್ತು ಆಧ್ಯಾತ್ಮಿಕ ಲಾಭವನ್ನು ಗಳಿಸುತ್ತಾರೆ. ಇಲ್ಲಿ ಬ್ರಿಟನ್‌ನಲ್ಲಿ ಈ ಕಾಲದ ಖಲೀಫರು ಇರುವ ಕಾರಣ ಲೋಕದ ಮೂಲೆ ಮೂಲೆಗಳಿಂದ ಜನರು ಇಲ್ಲಿನ ಜಲ್ಸಕ್ಕೆ ಆಗಮಿಸುತ್ತಾರೆ. ಅವರು ಧಾರ್ಮಿಕ ಜ್ಞಾನ ಗಳಿಸಲು ಮತ್ತು ತಮ್ಮ ಆಧ್ಯಾತ್ಮಿಕ ದಾಹವನ್ನು ನೀಗಿಸಲು ಆಗಮಿಸುತ್ತಾರೆ. ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗುಲಾಮರು ಅಲ್ಲಾಹನ ಆದೇಶ ಪ್ರಕಾರ ನಿಸ್ವಾರ್ಥವಾಗಿ, ಯಾವುದೇ ಬಳಲಿಕೆಯಿಲ್ಲದೆ, ಯಾವುದೇ ಬೇಸರಪಡದೆ ಅತಿಥಿಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಅತಿಥಿಗಳಿಗೆ ಸೇವೆ ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ. ನಾವು ಜಲ್ಸದ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಮಾಡಲು ಪ್ರಯತ್ನಿಸಬೇಕಾಗಿದೆ. ಜಲ್ಸಕ್ಕೆ ಆಗಮಿಸುವ ಅಹ್ಮದಿಯೇತರ ಮುಸ್ಲಿಮರು ಮತ್ತು ಮುಸ್ಲಿಮೇತರರು ಸಹ ಯಾವಾಗಲೂ ನಮ್ಮ ಕಾರ್ಯಕರ್ತರ ಕೆಲಸಗಳನ್ನು ನೋಡಿ ಪ್ರಭಾವಿತರಾಗುತ್ತಾರೆ. ಚಿಕ್ಕ ಚಿಕ್ಕ ಮಕ್ಕಳು ಸಹ

ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಬಗ್ಗೆ ಅವರು ಆಶ್ಚರ್ಯಗೊಳ್ಳುತ್ತಾರೆ. ಕಳೆದ ವರ್ಷ ಯುಗಾಂಡ ದೇಶದಿಂದ ಅಲ್ಲಿನ ಓರ್ವ ಸಚಿವರು ಅತಿಥಿಯಾಗಿ ಆಗಮಿಸಿದ್ದರು. ಅವರು ಹೇಳಿದರು: ಅತಿಥಿ ಸತ್ಕಾರದ ವ್ಯವಸ್ಥೆ ನೋಡಿ, ಜನರು ಸ್ವಯಂಸೇವಕರಾಗಿ ಎಷ್ಟು ತ್ಯಾಗ ಮನೋಭಾವದಿಂದ ವರ್ತಿಸುತ್ತಾರೆಂಬುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ನಾನು ಭಾಗವಹಿಸಲು ಹೋಗುತ್ತಿರುವ ಜಲ್ಸದಲ್ಲಿ ಮನುಷ್ಯರಲ್ಲ, ದೇವ ದೂತರು ಕಾರ್ಯನಿರತರಾಗಿದ್ದಾರೆ ಎಂದು ಮೊದಲು ನಾನು ಊಹಿಸಿಯೂ ಇರಲಿಲ್ಲ. ಅವರು ಹೇಳುತ್ತಾರೆ: ಇಪ್ಪತ್ತು ಸಾರಿ ಒಂದು ವಸ್ತುವನ್ನು ಪುನಃ ಪುನಃ ಆವಶ್ಯಪಟ್ಟರೂ ಸಹ ಸಂತೋಷಪೂರ್ವಕವಾಗಿ ಅವರು ಅದನ್ನು ಕೊಡುತ್ತಾರೆ. ಕೆಲವರು ಹೀಗೆ ಹೇಳಿದರು: ಮಕ್ಕಳು ಊಟ ಪೂರೈಕೆ ಮಾಡುವುದರಲ್ಲಿ ನಿರತರಾಗಿರುವಾಗ ಬಹಳ ಸಂತೋಷ ಭರಿತರಾಗಿ ಊಟ ತಿನ್ನಿಸುತ್ತಿದ್ದರು. ಅವರು ಜಲ್ಸ ನಡೆಯುತ್ತಿದ್ದಾಗ ಬಹಳ ಹಸನ್ಮುಖರಾಗಿ ಕುಡಿಯಲು ನೀರು ನೀಡುತ್ತಾರೆ. ಪದೇ ಪದೇ ವಸ್ತುಗಳನ್ನು ಆವಶ್ಯಪಟ್ಟಾಗ ಸಂತೋಷದಿಂದ ಕೊಡುತ್ತಾ ಇರುತ್ತಾರೆ. ಇದು ಕೇವಲ ಗಣ್ಯರೊಂದಿಗೆ ಮಾತ್ರವಲ್ಲ ಪ್ರತಿಯೊಬ್ಬ ಅತಿಥಿಯೊಂದಿಗೆ ಕಾರ್ಯಕರ್ತರ ವರ್ತನೆ ಹೀಗೆಯೇ ಇತ್ತು. ಇಂತಹ ಸೇವಾ ಮನೋಭಾವ ಪ್ರತಿಯೊಬ್ಬ ಅಹ್ಮದಿ ಕಾರ್ಯಕರ್ತನ ಗುಣವಾಗಿದೆ. ಈ ಗುಣವನ್ನು ಪ್ರತಿಯೊಬ್ಬ ಕಾರ್ಯಕರ್ತ ಯಾವಾಗಲೂ ಜೀವಂತವಾಗಿಡಬೇಕು. ಎಲ್ಲ ವಿಭಾಗದವರೂ ಹೀಗೆ ಮಾಡಬೇಕು. ನಮ್ಮ ಜಲ್ಸಕ್ಕೆ ಅತಿಥಿಗಳು ಆಗಮಿಸಿದಾಗ ಅವರು ಜಮಾಅತಿನ ವಿವಿಧ ವಿಭಾಗಗಳೊಂದಿಗೆ ಸಂಪರ್ಕ ಹೊಂದುತ್ತಾರೆ. ವ್ಯವಸ್ಥಾಪಕರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಮಾತನ್ನು ನೆನಪಿಟ್ಟುಕೊಳ್ಳಬೇಕು: ನೀವು ನಿಮ್ಮ ಸಹೋದರನನ್ನು ಮುಗುಳುನಗೆಯೊಂದಿಗೆ ಸ್ವಾಗತಿಸಿದಲ್ಲಿ ಅದೊಂದು ಸದಖ (ದಾನಧರ್ಮ) ಆಗುತ್ತದೆ ಎಂದು. ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು: ಸಾಮಾನ್ಯ ಒಳಿತನ್ನು ಸಹ ಸಣ್ಣದೆಂದು ಭಾವಿಸಬೇಡಿರಿ. ನಿಮ್ಮ ಸಹೋದರನನ್ನು ಪ್ರೀತಿಯಿಂದ ಸ್ವಾಗತಿಸುವುದು ಸಹ ಒಳಿತಾಗಿದೆ. ನೋಡಿರಿ, ಇಸ್ಲಾಮಿನ ಉಪದೇಶಗಳು ಎಷ್ಟೊಂದು ಸುಂದರ ಉಪದೇಶಗಳಾಗಿವೆ.

ಮಾರ್ಗ ತೋರಿಸಿಕೊಡುವುದು ಸಹ ಒಂದು ಸತ್ಕರ್ಮ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದ ಕಾರ್ಯಕರ್ತರು ಈ ಬಗ್ಗೆ ಗಮನಿಸಬೇಕು. ಆಗಮಿಸುವ ಅತಿಥಿಗಳನ್ನು ಉತ್ತಮ ಸ್ವಭಾವದೊಂದಿಗೆ ಸ್ವಾಗತಿಸಿ ಅವರನ್ನು ಅವರ ವಾಸ ಸ್ಥಳಗಳಿಗೆ ಸಹಾಯಕರ ಮೂಲಕ ತಲಪಿಸಬೇಕು. ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಹೆಚ್ಚು ಶ್ರದ್ಧೆ ನೀಡಬೇಕು.

ಅತಿಥಿ ಸತ್ಕಾರದಲ್ಲಿ ಊಟ ಒದಗಿಸುವುದು ಸಹ ಸೇರಿದೆ. ಊಟ ಒದಗಿಸುವ ವ್ಯವಸ್ಥಾಪಕರು ಮತ್ತು ಅವರ ಸಹಾಯಕರು ಅತಿಥಿಗಳೊಂದಿಗೆ ಒಳ್ಳೆಯ ಸ್ವಭಾವ ಗುಣದೊಂದಿಗೆ ವರ್ತಿಸಬೇಕು. ಇದು ಅತಿಥಿಗೆ ದೊರಕಬೇಕಾದ ಅವರ ಹಕ್ಕಾಗಿದೆ. ಇದು ಆತಿಥೇಯನ ಕಡ್ಡಾಯ ಕರ್ತವ್ಯವೂ ಆಗಿದೆ. ಆಹಾರ ಪೂರೈಸುವುದು ಎಷ್ಟೊಂದು ಸೂಕ್ಷ್ಮ ಸಂಗತಿಯಾಗಿದೆಯೆಂದರೆ, ಊಟ ಸರಬರಾಜು ಮಾಡುವವನು ಅನಾವಶ್ಯಕವಾಗಿ ಏನಾದರೂ ಹೇಳುವುದು ಸಹ ಅತಿಥಿಗೆ ಮನೋವೇದನೆ ಉಂಟುಮಾಡುವುದಾಗಬಹುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಚರರು (ಸಹಾಬ) ಹೇಗೆ ಅತಿಥಿ ಸತ್ಕಾರ ಮಾಡುತ್ತಿದ್ದರೆಂದರೆ ಅವು ಯಾವಾಗಲೂ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡಲು ಅರ್ಹವಾಗಿವೆ.

ಅಲ್ಲಾಹನ ಅನುಗ್ರಹದಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನ ಪ್ರಕಾರ ಲೋಕದಲ್ಲಿ ಎಲ್ಲೆಲ್ಲಿ ಜಮಾಅತ್ ಬಲಿಷ್ಠವಾಗಿ ಸ್ಥಾಪಿತವಾಗಿದೆಯೋ ಅಲ್ಲೆಲ್ಲಾ ಲಂಗರ್ ಖಾನಗಳು ಚಲಾಯಿಸಲ್ಪಡುತ್ತವೆ. ಜಲ್ಸದ ದಿನಗಳಲ್ಲಿ ಇದರ ವಿಶಿಷ್ಟ ವ್ಯವಸ್ಥೆ ಮಾಡಲಾಗುತ್ತಿದೆ. ನಾವು ಮಾಡಬೇಕಾದುದೇನೆಂದರೆ ಲಂಗರ್ ಖಾನದಿಂದ ಊಟವನ್ನು ತಂದು ಅತಿಥಿಗಳ ಮುಂದೆ ಇರಿಸಬೇಕು ಮತ್ತು ಅತಿಥಿಗಳೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕು. ಜಲ್ಸಕ್ಕೆ ಆಗಮಿಸಿದವರ, ಎಂದರೆ ಧರ್ಮಕಾರ್ಯಕ್ಕೆ ಪ್ರಯಾಣ ಮಾಡಿದವರ ಸೇವೆ ಮಾಡಿದರೆ ಅಲ್ಲಾಹನು ಸಂತೋಷಪಡುತ್ತಾನೆ. ಸರಿಯಾದ ರೀತಿಯಲ್ಲಿ ಅತಿಥಿ ಸೇವೆ ಮಾಡದಿದ್ದರೆ ಅಲ್ಲಾಹನು ಕೋಪಗೊಳ್ಳುವನು.

ಒಂದು ಸಂದರ್ಭದಲ್ಲಿ ಕೆಲವು ಅತಿಥಿಗಳೊಂದಿಗೆ ಅಸಾಮಾನ್ಯವಾಗಿ ವರ್ತಿಸಲಾಯಿತು. ಕೆಲವರನ್ನು ನಿರ್ಲಕ್ಷಿಸಲಾಯಿತು. ಹೀಗೆ ಮಾಡಿದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿದ್ದ ಅತಿಥಿ ಸತ್ಕಾರ ವ್ಯವಸ್ಥೆಯ ಕಾರ್ಯಕರ್ತರಾಗಿದ್ದರು. ಆಗ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ರಾತ್ರಿ ಹೀಗೆ ತಿಳಿಸಿದನು: ತೋರಿಕೆಯ ಕೆಲಸ ನಡೆಸಲಾಗಿದೆ. ಸರಿಯಾದ ರೀತಿಯಲ್ಲಿ ಅತಿಥಿ ಸತ್ಕಾರ ನಡೆಯಲಿಲ್ಲ. ಕೆಲವು ಬಡವರಿಗೆ ಆಹಾರ ನೀಡಲಿಲ್ಲ ಎಂದು. ಈ ವಿಷಯ ತಿಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಕೋಪಗೊಂಡರು. ಆಹಾರ ಒದಗಿಸುವ ವ್ಯವಸ್ಥೆ ಸ್ವತಃ ವಹಿಸಿಕೊಂಡರು. ಅಲ್ಲಿನ ಕೆಲಸಗಾರರನ್ನು ಆರು ತಿಂಗಳ ಕಾಲ ಖಾದಿಯಾನಿನಿಂದ ಹೊರಗೆ ಹಾಕಿದುದಾಗಿಯೂ ವರದಿಗಳಿವೆ.

ನಾವು ಸೇವೆ ಮಾಡಲು ಮುಂದೆ ಬರುವಾಗ ಯಾರನ್ನೂ ತಾರತಮ್ಯದಿಂದ ನೋಡದೆ ಎಲ್ಲರಿಗೂ ಸೇವೆ ಸಲ್ಲಿಸಬೇಕು. ಪ್ರತಿಯೊಂದು ಜಲ್ಸಕ್ಕೆ ಬರುವವರು ಜಲ್ಸದ ಅತಿಥಿಯಾಗಿರುತ್ತಾರೆ. ಪ್ರತಿಯೊಬ್ಬನೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವುದು ಪ್ರತಿಯೊಬ್ಬನೊಂದಿಗೆ ಸುಸ್ವಭಾವದಿಂದ ವರ್ತಿಸುವುದು ಆವಶ್ಯಕವಾಗಿದೆ. ಒಬ್ಬ ಶ್ರೀಮಂತ, ಒಬ್ಬ ವಿಶಿಷ್ಟ ಅತಿಥಿ ಅವನಿಗೆ ವಿಶಿಷ್ಟ ಸ್ಥಳದಲ್ಲಿ ಊಟಕೊಡಬೇಕು ಇನ್ನೊಬ್ಬನಿಗೆ ಅಲ್ಲಿ ಇಲ್ಲ, ಎಂಬುದು ಸರಿಯಲ್ಲ.

ನಾವು ಹೀಗೆ ಪ್ರಾರ್ಥನೆ ಮಾಡಬೇಕು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ನಾವು ಸಲ್ಲಿಸುವ ಈ ಚಿಕ್ಕ ಸೇವೆಯನ್ನು ಅಲ್ಲಾಹನು ಅದನ್ನು ಅಂಗೀಕರಿಸಲಿ. ನಮ್ಮ ಕೆಲಸದಲ್ಲಿ ಯಾವುದೇ ರೀತಿಯ ತೋರಿಕೆ ಇರದಂತಾಗಲಿ. ಅಲ್ಲಾಹನಿಗೋಸ್ಕರ ನಮ್ಮ ಕೆಲಸ ನಡೆಯುವಂತಾಗಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಕೆಲವೊಮ್ಮೆ ಅತಿಥಿಗಳು ಎಷ್ಟು ಹೆಚ್ಚಿಗೆ ಆಗಮಿಸುತ್ತಿದ್ದರೆಂದರೆ ಅವರಿಗೆ ವಾಸದ ವ್ಯವಸ್ಥೆ ಮಾಡುವುದು ಬಹಳ ಕಷ್ಟಕರವಾಗುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಹೀಗೆ ತಿಳಿಸಿದ್ದನು: ನೀನು ಗಾಬರಿಗೊಳ್ಳಬೇಡ. ಬಳಲಬೇಡ ಎಂದು. ಈ ಆದೇಶ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಗ ಖಾದಿಯಾನಿನಲ್ಲಿ ಸಾಧ್ಯವಿರುವಷ್ಟು ವ್ಯವಸ್ಥೆ

ಅತಿಥಿಗಳಿಗೆ ಮಾಡಿಕೊಡುತ್ತಿದ್ದರು. ಕೆಲವು ಸಾರಿ ಹೇಗಾಯಿತೆಂದರೆ ಅತಿಥಿಗಳು ಹೆಚ್ಚಾಗಿ ಆಗಮಿಸಿದ ಕಾರಣ ಚಳಿಗಾಲದಲ್ಲಿ ಅತಿಥಿಗಳಿಗೆ ಹೊದ್ದುಕೊಳ್ಳಲು ಹಝ್ರತ್ ಮಸೀಹ್ ಮೌಊದ್ ಅಲೈಸ್ಸಲಾಮರು ತಮ್ಮ ಮತ್ತು ತಮ್ಮ ಮಕ್ಕಳ ಕಂಬಳಿ ಹೊದಿಕೆಗಳನ್ನು ಸಹ ಅತಿಥಿಗಳಿಗೆ ಕೊಟ್ಟರು. ಒಮ್ಮೆ ಹೆಚ್ಚಿನ ಸಂಖ್ಯೆಯಲ್ಲಿ ಅತಿಥಿಗಳು ಆಗಮಿಸಿದಾಗ ಹಝ್ರತ್ ಅಮ್ಮಾಜಾನ್ (ಹಝ್ರತ್ ಉಮ್ಮುಲ್ ಮೂಮಿನೀನ್) ಬಹಳ ಗಾಬರಿಗೊಂಡರು. ಅತಿಥಿಗಳನ್ನು ಎಲ್ಲಿ ನಿಲ್ಲಿಸುವುದು ಅವರಿಗೆ ಹೇಗೆ ವ್ಯವಸ್ಥೆ ಮಾಡುವುದು ಎಂದು ಅವರು ಚಿಂತಿಸಿದರು.

ತರಬೇತಿಯ ವಿಭಾಗ ಕ್ರಿಯಾಶೀಲವಾಗಬೇಕು. ಜಲ್ಸಕ್ಕೆ ಆಗಮಿಸುವವರಿಗೆ ಜಲ್ಸದ ಮಹತ್ವದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಒಬ್ಬ ಕಾರ್ಯಕರ್ತ ಸ್ವಯಂ ಸೇವಕನಾಗಿ ಜಲ್ಸದಲ್ಲಿ ಸೇರುವಾಗ ಅವನು ನಿಸ್ವಾರ್ಥತೆಯಿಂದ ಕೆಲಸ ಮಾಡುವುದು ಅವನಿಗೆ ಕಡ್ಡಾಯವಾಗಿದೆ. ಅಲ್ಲಾಹನ ಅನುಗ್ರಹದಿಂದ ಸಾಮಾನ್ಯವಾಗಿ ಎಲ್ಲ ಕಾರ್ಯಕರ್ತರು ನಾನು ಹಿಂದೆ ಹೇಳಿದ ಹಾಗೆ ಈ ಭಾವನೆಯಿಂದ ಕೆಲಸ ಮಾಡುತ್ತಾರೆ. ಆದರೆ ಕೆಲವರು ತಪ್ಪಾಗಿ ವರ್ತಿಸುತ್ತಾರೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಾನು ಹಿಂದೆ ಪ್ರಸ್ತಾಪಿಸಿದ ಉಪದೇಶವನ್ನು ನೆನಪಿನಲ್ಲಿಡಬೇಕು. ಯಾವಾಗಲೂ ಉತ್ತಮ ಸ್ವಭಾವ ಗುಣಗಳಿಂದ ಅತಿಥಿಗಳೊಂದಿಗೆ ವರ್ತಿಸಬೇಕು.

ಇನ್ನೊಂದು ಮುಖ್ಯ ವಿಷಯವೇನೆಂದರೆ, ಕಾರ್ಯಕರ್ತರು ಯಾವಾಗಲೂ ಜಾಗರೂಕರಾಗಿರಬೇಕು. ಸೆಕ್ಯುರಿಟಿ ಕೇವಲ ಸೆಕ್ಯುರಿಟಿ ವಿಭಾಗದವರ ಕೆಲಸವಲ್ಲ. ಪ್ರತಿಯೊಂದು ವಿಭಾಗದ ಪ್ರತಿಯೊಬ್ಬ ಕಾರ್ಯಕರ್ತನೂ ತನ್ನ ಸುತ್ತು ಮುತ್ತಲನ್ನು ಶ್ರದ್ಧೆಯಿಂದ ನೋಡುತ್ತಿರಬೇಕು. ಕಾರ್ಯಕರ್ತರು ನೆನಪಿಡಬೇಕಾದ ಇನ್ನೊಂದು ವಿಷಯವೇನೆಂದರೆ ಜಲ್ಸ ಮುಗಿತಾಯವಾದ ನಂತರ ಕೇವಲ ವೈಂಡ್‌ಅಪ್ (Windup) ಕಾರ್ಯಕರ್ತರು ಮಾತ್ರ ಅಲ್ಲಿ ನಿಂತರ ಸಾಲದು. ಅಲ್ಲಿ ಕಾರ್ಯನಿರತರಾಗಿರುವ ಎಲ್ಲ ಕಾರ್ಯಕರ್ತರು ಅಲ್ಲಿರಬೇಕು. ಕಾರ್ಯಕರ್ತರ ಮೇಲ್ವಿಚಾರಕರು ಅನುಮತಿ ನೀಡುವ ತನಕ ಅಲ್ಲಿರಬೇಕು.

ಎಲ್ಲಕ್ಕಿಂತ ಮಿಗಿಲಾಗಿ, ಕಾರ್ಯಕರ್ತರು ಮತ್ತು ಎಲ್ಲ ಅಹ್ಮದಿಯರು ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು. ಪ್ರತಿಯೊಬ್ಬನು ಉತ್ತಮ ರೀತಿಯಲ್ಲಿ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅಲ್ಲಾಹನು ಅನುಗ್ರಹಿಸಲಿ ಎಂದು. ಜಲ್ಸಗಾಹ್‌ನಲ್ಲಿ ಈಗ ಕೆಲಸ ಮಾಡುತ್ತಿರುವ ಕಾರ್ಯಕರ್ತರನ್ನು ಅಲ್ಲಾಹನು ಎಲ್ಲ ರೀತಿಗಳಲ್ಲೂ ಸಂರಕ್ಷಿಸಲಿ. ಕೆಲವು ಸಾರಿ ಬಹಳ ಕಷ್ಟದ ಕೆಲಸ ಸಹ ಮಾಡಬೇಕಾಗುತ್ತದೆ. ಕೆಲವು ಸಾರಿ ಗಾಯಗಳಾಗುವ ಸಂಭವಗಳೂ ಇರುತ್ತವೆ. ಅಲ್ಲಾಹನು ಪ್ರತಿಯೊಂದು ರೀತಿಯಲ್ಲಿ ಪ್ರತಿಯೊಬ್ಬನನ್ನು ಸಂರಕ್ಷಿಸಲಿ.

ಈ ಜಲ್ಸವನ್ನು ಅಲ್ಲಾಹನು ಎಲ್ಲ ರೀತಿಗಳಲ್ಲೂ ಅನುಗ್ರಹಭರಿತವನ್ನಾಗಿ ಯಶಸ್ವಿಯನ್ನಾಗಿ ಮಾಡಲಿ. ಪ್ರತಿಯೊಬ್ಬ ಶತ್ರು ಮತ್ತು ಪ್ರತಿಯೊಬ್ಬ ದುಷ್ಟನ ಕೆಡುಕಿನಿಂದ ಅಲ್ಲಾಹನು ಜಮಾಅತನ್ನು ಎಲ್ಲ ರೀತಿಗಳಲ್ಲೂ ಸಂರಕ್ಷಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಲ್ಸಕ್ಕೆ ಆಗಮಿಸುವ ಅತಿಥಿಗಳಿಗೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ಎಲ್ಲ ಕಾರ್ಯಕರ್ತರಿಗೆ ದೊರಕುವಂತಾಗಲಿ. ಸೇವೆ ಮಾಡುವುದರಲ್ಲಿ ಉನ್ನತ ಮಾದರಿ ಸ್ಥಾಪಿಸಿದವರು ಅದಕ್ಕಿಂತ ಉತ್ತಮ ಮಟ್ಟವನ್ನು ಪ್ರತಿ ಸಾರಿ ತೋರಿಸುವವರಾಗಲಿ. ಅವರು ಈ ಸಾರಿ ಮೊದಲಿಗಿಂತ ಉತ್ತಮ ಸೇವೆ ಮಾಡುವವರಾಗಿರಲಿ. ನಮ್ಮ ಪ್ರತಿಯೊಂದು ಹೆಜ್ಜೆ ಮುಂದಕ್ಕೆ ಸಾಗುವುದಾಗಿರಬೇಕು. ಇದರ ಬಗ್ಗೆ ಯಾವ ಕೊರತೆಯೂ ಇರಬಾರದು. ಇಂತಹ ರೀತಿ ಸೇವೆ ಮಾಡಿದರೆ ಅಲ್ಲಾಹನು ಅದನ್ನು ಪ್ರೀತಿಯಿಂದ ವೀಕ್ಷಿಸುತ್ತಾನೆ. ಅಲ್ಲಾಹನು ಎಲ್ಲರಿಗೂ ಈ ಭಾಗ್ಯ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 05-08-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon